ಅಸಲು ದಾವೆ ಸಂಃ 250/2023

ಪಿ.ಡಬ್ಲ್ಯೂಃ1

ಈ ದಿನ ದಿನಾಂಕಃ 28.07.2026 ರಂದು ಸಾಕ್ಷಿಯನ್ನು ಇಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಮುಂದುವರೆದ ಪಾಟೀಸವಾಲು ಪ್ರತಿವಾದಿ ಪರ ಶ್ರೀ ಎಸ್ ಬಿ ಪಿ ವಕೀಲರಿಂದಃ**

ದಾವಾ ಆಸ್ತಿಯನ್ನು ನಾವು ಅಳತೆ ಮಾಡಿಸಿಲ್ಲ ಪಕ್ಕದ ಸೈಟಿನವರು ಅಳತೆ ಮಾಡಿಸಿರುತ್ತಾರೆ. 1ನೇ ಪ್ರತಿವಾದಿ ದಾವಾ ಆಸ್ತಿಯಲ್ಲಿ ಎಷ್ಟು ವಿಸ್ತೀರ್ಣ ಒತ್ತುವರಿ ಮಾಡಿರುತ್ತಾರೆ ಎಂದು ತೋರಿಸಲು ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿರಬಹುದು. ನಾನು ದಾವಾ ಆಸ್ತಿಗೆ ಸಂಬಂದಿಸಿದಂತೆ ಅಳತೆ ಮಾಡಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ವಕೀರಿಗೆ ನೀಡಿರುತ್ತೇವೆ. 1ನೇ ಪ್ರತಿವಾದಿ ಗಂಡ ತಾನು ಖರೀದಿ ಮಾಡಿದ್ದ ಆಸ್ತಿಯಲ್ಲಿ ಪಂಚಾಯಿತಿಯಿಂದ ಪರವಾನಿಗೆ ಪಡೆದು ಮನೆ

ಕಟ್ಟಿ ಕೊಂಡು ವಾಸವಾಗಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. 1ನೇ ಪ್ರತಿವಾದಿ ಗಂಡನ ಹೆಸರಿನಲ್ಲಿ ಇ-ಖಾತಾ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. 1ನೇ ಪ್ರತಿವಾದಿ ಗಂಡ ತನ್ನ ಸ್ವತ್ತಿನಲ್ಲಿ ಮನೆ ಕಟ್ಟು ಪೂರ್ವದಲ್ಲಿ ಕೆ ಇ ಬಿಯಿಂದ ಎನ್ ಓಸಿ ಪಡೆದುಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 1ನೇ



ಪ್ರತಿವಾದಿ ಗಂಡ 2000 ನೇ ಇಸವಿಯಲ್ಲಿ ಮನೆ ಕಟ್ಟಲು ಪ್ರಾರಂಭಿಸಿದಾಗ ನಾನು ಗುದ್ದಲಿ ಪೂಜೆ ಮತ್ತು ಬಾಗಿಲು ಕೂರಿಸುವ ಪೂಜೆಗೆ ಮತ್ತು ಗೃಹಪ್ರವೇಶಕ್ಕೆ ಅತಿಥಿಯಾಗಿ ಹೋಗಿದ್ದೆ ಎಂದರೆ ಗೃಹಪ್ರವೇಶಕ್ಕೆ ಮಾತ್ರ ಹೋಗಿದ್ದೆ. ನಾನು ಖರೀದಿ ಮಾಡಿದ ನಿವೇಶನದ ಅಳತೆಗೇ ಅನುಗುಣವಾಗಿ ಈಗಲೂ ಸಹ ಹಾಗೇಯೇ ಖಾಲಿ ಸೈಟ್ ಇದೆ ಎಂದರೆ ಹಾಗೇ ಇರುತ್ತದೆ, 1ನೇ ಪ್ರತಿವಾದಿ ಗಂಡ ಒತ್ತುವರಿ ಮಾಡಿರುತ್ತಾರೆ.

ನಾನು ಹಾಜರುಪಡಿಸಿರುವ ಇ-ಖಾತಾದಲ್ಲಿ ದಕ್ಷಿಣಕ್ಕೆ ಚಿಗಟೇರಪ್ಪನವರ ಜಮೀನು ಎಂದು ಇರುತ್ತದೆ. ನಾನು ನನ್ನ ದಾವಾದಲ್ಲಿ ದಾವಾ ಆಸ್ತಿಯ ದಕ್ಷಿಣ ದಿಕ್ಕಿಗೆ ರಸ್ತೆ ಮತ್ತು ಚಿಗಟೇರಪ್ಪನವರ ಜಮೀನು ಎಂದು ತೋರಿಸಿರುತ್ತೇನೆ ಎಂದರೆ ರಸ್ತೆ ಇದೆ ಎಂದು ಹೇಳಿರುವುದಿಲ್ಲ. ನಾನು ದಾವಾ ಆಸ್ತಿಯಲ್ಲಿ ನಮೂದಿಸಿರುವ ಚೆಕ್ಕುಬಂದಿಗೂ ನಾನು ಹಾಜರುಪಡಿಸಿರುವ ಇ-ಸ್ವತ್ತಿನ ಚೆಕ್ಕುಬಂದಿಯ ನಡುವೆ ಸಾಕಷ್ಟು ವ್ಯತ್ಯಾಸ ಇದೆ ಎಂದರೆ ನನಗೆ ಗೊತ್ತಿಲ್ಲ. ವಾದ ಪತ್ರದಲ್ಲಿ ಒತ್ತುವರಿ ಮಾಡಿರುವ ವಿಸ್ತೀರ್ಣದ ಬಗ್ಗೆ ಷೆಡ್ಯೂಲ್ ನಲ್ಲಿ ತೋರಿಸಿಲ್ಲ ಎಂದರೆ ನನಗೆಗೊತ್ತಿಲ್ಲ. 2000ನೇ ಇಸವಿಯಿಂದ 1ನೇ ಪ್ರತಿವಾದಿ ಗಂಡ ಖರೀದಿ ಮಾಡಿದ ಸ್ವತ್ತಿನಲ್ಲಿ ಮನೆ ಕಟ್ಟಿಕೊಂಡು ವಾಸವಾಗಿದ್ದಾರೆ ಎಂದರೆ ಸರಿ. 2000 ನೇ ಇಸವಿಯಿಂದ 2023 ನೇಇಸವಿಯವರೆಗೆ 1ನೇ ಪ್ರತಿವಾದಿ ಕಟ್ಟಿಕೊಂಡಿರುವ ಮನೆ ಬಗ್ಗೆ ನಾನು ಎಂದಿಗೂ ಪ್ರಶ್ನೆ ಮಾಡಿಲ್ಲ ಎಂದರೆ ಸರಿ. 1ನೇ ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆಯನ್ನು ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಪಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

02ನೇ ಹೆಚ್ಚುವರಿ  ಸಿವಿಲ್ ನ್ಯಾಯಾಧೀಶರು

ಮತ್ತು ಜೆಎಂಎಫ್‌ಸಿ.ಚನ್ನಗಿರಿ.